KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. : **28**

ದೋ.ಸಾ. : **34**

ದಿ.**24.12.2025**

| | |
|---|---|
| ಹೆಸರು | : ನಂದೀಶ್ ಬಿ.ಕೆ. |
| ತಂದೆಯ ಹೆಸರು | : ಕುಮಾರ್ |
| ವಯಸ್ಸು | : **30** ವರ್ಷ |
| ಉದ್ಯೋಗ | : ಸಿಪಿಸಿ ನಂ.**1050,** ಹೊನ್ನವಳ್ಳಿ ಪೋಲೀಸ್ ಠಾಣೆ |
| ವಾಸಸ್ಥಳ | : ಬೈಲಹಳ್ಳಿ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕು |

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ನಾನು 2018 ರಿಂದ ಜುಲೈ 2023 ರವರೆಗೆ ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿ.21.03.2023 ರಂದು ನನಗೆ ಮತ್ತು ಚಾ ಸಾ 37 ಪುಟ್ಟರಾಜು ಸಿಹೆಚ್ಸಿ 115 ರವರಿಗೆ ಈ ಪ್ರಕರಣದ ಆರೋಪಿ ಅಣ್ಣಪ್ಪಸ್ವಾಮಿಯನ್ನು ಪತ್ತೆ ಮಾಡಲು ಕರ್ತವ್ಯಕ್ಕೆ ನೇಮಕ ಮಾಡಿದ್ದು, ಅದೇ ದಿನ ಆರೋಪಿ ಪತ್ತೆಗಾಗಿ ನಾವು ಹೆಬ್ಬೂರು, ಕ್ಯಾತ್ಸಂದ್ರ ಕಡೆ ಗಸ್ತು ಮಾಡಿ ಬಾತ್ಮಿದಾರರನ್ನು ಸಂಪರ್ಕಿಸಿ, ಆರೋಪಿ ಬೆಂಗಳೂರಿನ ಆಂಧ್ರಹಳ್ಳಿಯ ರಂಗನಾಥ ಬಾರ್ ಬಳಿ ಇದ್ದಾನೆಂದು ಮಾಹಿತಿ ಬಂದ ಮೇರೆಗೆ ಅಲ್ಲಿಗೆ ಹೋಗಿ ಮಧ್ಯಾಹ್ನ 3.30 ಕ್ಕೆ ಆರೋಪಿಯನ್ನು ವಶಕ್ಕೆ ಪಡೆದು, ಕ್ಯಾತ್ಸಂದ್ರ ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿರುತ್ತೇವೆ. ವರದಿಯನ್ನು ನನ್ನ ಜೊತೆ ಬಂದಿದ್ದ ಪುಟ್ಟರಾಜು ಸಿಹೆಚ್ ಸಿ 115 ಕೊಟ್ಟಿರುತ್ತಾರೆ. ಆ ವರದಿಯನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ60 ಎಂದು ಗುರುತಿಸಲಾಯಿತು. ಪುಟ್ಟರಾಜು

ನನ್ನ ಎದುರಿಗೆ ಸಹಿ ಮಾಡಿರುವುದರಿಂದ ಅವರ ಸಹಿಯನ್ನು ಗುರುತಿಸುತ್ತೇನೆ. ಅವರ ಸಹಿಯನ್ನು ನಿಶಾನೆ ಪಿ60(ಎ) ಎಂದು ಗುರುತಿಸಲಾಯಿತು. ಆ ದಿನ ಹಾಜರುಪಡಿಸಿದ ಆರೋಪಿ ಈಗ ವಿಸಿಯಲ್ಲಿ ಇದ್ದಾನೆ.

**<u>ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:</u>**

**3.** ನಮ್ಮನ್ನು ಬೆಳಿಗ್ಗೆ 8.00 ಗಂಟೆಗೆ ಕರ್ತವ್ಯಕ್ಕೆ ನೇಮಿಸಿದ್ದರು. ಬಾತ್ಮಿದಾರರಿಂದ ಆರೋಪಿ ಆತನ ವಿಳಾಸದಲ್ಲಿರಬಹುದೆಂದು ಮಾಹಿತಿ ಸಿಕ್ಕಿತು. ನಾವು ಆತನನ್ನು ಹುಡುಕಿಕೊಂಡು ಆಂಧ್ರಹಳ್ಳಿಯ ವಿಳಾಸಕ್ಕೆ ಹೋಗಿದ್ದೆವು. ಆಂಧ್ರಹಳ್ಳಿಯ ವಿಳಾಸದಲ್ಲಿ ಯಾರೂ ಇರಲಿಲ್ಲ. ನಮ್ಮನ್ನು ಆರೋಪಿಯ ಪತ್ತೆಗಾಗಿ ನೇಮಕ ಮಾಡಿಲ್ಲ, ನಾವು ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಬಂದು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು